ದಿನಾಂಕಃ 09-04-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ಕರಾಟೆ ಕ್ಲಾಸ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.30 ಗಂಟೆವರೆಗೆ ಇರುತ್ತದೆ. ಕರಾಟೆ ಕ್ಲಾಸನಲ್ಲಿ ಹಾಜರಾದ ಬಗ್ಗೆ ಅಟೆಂಡನ್ಸ ರೆಜಿಸ್ಟರ ಇತ್ತು. ಆ ದಿನ ಕರಾಟೆ ಕ್ಲಾಸ ಮುಗಿಸಿ ಆಟೋದಲ್ಲಿ ಮಧ್ಯಾಹ್ನ 2.45 ಗಂಟೆಗೆ ಶಿರೋಳ ಬಸಸ್ಟಾಂಡಗೆ ಬಂದಿರುತ್ತೇನೆ. ಬಸಸ್ಟಾಂಡನಿಂದ ನಮ್ಮ ಮನೆ ಅಂದಾಜು ಅರ್ಧ ಕಿ.ಮೀ ದೂರದಲ್ಲಿದೆ. ಬಸಸ್ಟಾಂಡನಿಂದ ನಮ್ಮ ಮನೆ ಜಮಖಂಡಿಗೆ ಹೋಗುವ ರಸ್ತೆಯಲ್ಲಿದೆ. ನಾನು ಮನೆಗೆ ಹೋಗುವಾಗ ಮಲ್ಲಪ್ಪ ಮತ್ತು ವಿಠ್ಠಲ ಇವರನ್ನು 30 ಹೆಜ್ಜೆಗಳ ಅಂತರದಿಂದ ನೋಡಿದ್ದೇನೆ. ಕಾರು ಎಷ್ಟು ದೂರದಿಂದ ನೋಡಿದ್ದೇನೆ ಎಂದರೆ 5 ಮೊಳ ದೂರದಿಂದ ನೋಡಿದ್ದೇನೆ. ಕಾರು ಮತ್ತು ಬೈಕ ನಡುವೆ ಡಿಕ್ಕಿಯಾಗಿಲ್ಲ. ಬೈಕ ಕಾರಿಗೆ ಅಡ್ಡಲಾಗಿ ನಿಲ್ಲಿಸಿದ್ದರು. ಸದರಿ ಕಾರಿನ ಹಿಂದೆ ಒಂದು ಬುಲೆಟ್, ಒಂದು ಶೈನ್ ಹೋಂಡಾ ಬೈಕ್, ಒಂದು ಸ್ಪ್ಲೆಂಡರ್ ಬೈಕ್ ಇದ್ದವು.

ನನ್ನ ದೊಡ್ಡಪ್ಪ ವಿಠ್ಠಲ ತಳಗೇರಿ ಹಾಗೂ ಅಜ್ಜ ಮಲ್ಲೆಪ್ಪ ತಳಗೇರಿ ಇವರ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಹಾಗೂ ಮಾತುಕತೆಯಾಗಿಲ್ಲ. ಬೈಕಗಳ ಸವಾರರು ಯಾವುದೇ ಆಯುಧಗಳನ್ನು ಹಿಡಿದುಕೊಂಡು ಬಂದಿಲ್ಲ. ಎಲ್ಲ ಆರೋಪಿತರು ಕಾರಿನಲ್ಲಿದ್ದ 7 ಕುಡುಗೋಲುಗಳು, 2 ಕೊಡಲಿಗಳು, 5 ತಲ್ವಾರಗಳನ್ನು ತೆಗೆದುಕೊಂಡರು. ಕಾರಿನಿಂದ ಆರೋಪಿತರು ಕುಡುಗೋಲು, ಕೊಡಲಿ ಹಾಗೂ ತಲ್ವಾರಗಳನ್ನು ತೆಗೆದುಕೊಳ್ಳುವುದನ್ನು ನೋಡಿ ನನ್ನ ದೊಡ್ಡಪ್ಪ ಗಣೆಯವರ ತೋಟದ ಕಡೆಗೆ ಓಡಿ ಹೋದ ಹಾಗೂ ಅಜ್ಜ ಕಲ್ಲೋಳ್ಳಿ ರಸ್ತೆ ಕಡೆಗೆ ಓಡಿ ಹೋದ. ಗಣೆಯವರ ತೋಟದಲ್ಲಿ ಯಾವುದೇ ಬೆಳೆ ಇರಲಿಲ್ಲ, ಖುಲ್ಲಾ ಇತ್ತು. ಸದರಿ ಗಣೆಯವರ ತೋಟದ ಸುತ್ತಲೂ ಮುಳ್ಳಿನ ಕಂಟಿ ಹಾಗೂ ಗಟಾರ ಇತ್ತು. ಸಾಕ್ಷಿ ಪುನಃ ಹೇಳುವುದೇನೆಂದರೆ ನನ್ನ ದೊಡ್ಡಪ್ಪ ಗಣೆಯವರ ತೋಟದೊಳಗೆ ಹೋಗಿಲ್ಲ.

ನಾನು ಕರಾಟೆ ಕ್ಲಾಸಗೆ ಹೋಗುವಾಗ ಮೊಬೈಲ ತೆಗೆದುಕೊಂಡು ಹೋಗಿಲ್ಲ. ನನ್ನ ದೊಡ್ಡಪ್ಪ ಗಣೆಯವರ ತೋಟದ ಕಡೆಗೆ ಹೋಗುವಾಗ ಅರುಣ, ಕಿರಣ, ಮಲ್ಲಪ್ಪ ಹುದ್ದಾರ, ರಾಜು, ಶಂಕ್ರೆಪ್ಪ ಇವರೆಲ್ಲರೂ ನನ್ನ ದೊಡ್ಡಪ್ಪನನ್ನು ಹಿಡಿದುಕೊಂಡರು. ಆರೋಪಿತರು ಕುಡುಗೋಲು, ಕೊಡಲಿ ಹಾಗೂ ತಲ್ವಾರಗಳನ್ನು ಕಾರಿನಿಂದ ತೆಗೆಯುವದನ್ನು ನೋಡಿ ನಾನು ಅಂಜಿ ಓಡಿ ಹೋಗಲಿಲ್ಲ. ನಾನು ಸಾರ್ವಜನಿಕರನ್ನು ಕೂಗಾಡಿ ಕರೆದಿಲ್ಲ,

ಏಕೆಂದರೆ ಅಲ್ಲಿ ಸುತ್ತಲೂ ಮನೆಗಳಿಲ್ಲ. ಆರೋಪಿತರು ನನ್ನ ದೊಡ್ಡಪ್ಪನನ್ನು ಹಿಡಿದುಕೊಂಡು ಹಲ್ಲೆ ಮಾಡುವಾಗ ಸಾರ್ವಜನಿಕರು ಯಾರೂ ಬಂದಿರಲಿಲ್ಲ.

ನನ್ನ ಅಜ್ಜ ಕಲ್ಲೋಳ್ಳಿ ರಸ್ತೆ ಕಡೆಗೆ ಬೈಕನಿಂದ 2 ಹೆಜ್ಜೆ ಹೋದಾಗ ರಾಜು ಮತ್ತು ಮಲ್ಲಪ್ಪ ಹುದ್ದಾರ ಹಿಡಿದುಕೊಂಡರು. ನನ್ನ ಅಜ್ಜ ಮಲೆಪ್ಪನಿಗೆ ಆರೋಪಿ ರಾಜು ಹಿಂದಿನ ಭಾಗಕ್ಕೆ ಕಲ್ಲು ಹೊಡೆದಿದ್ದಾನೆ. ಮಲ್ಲಪ್ಪ ಹುದ್ದಾರ ಬಂದು ತಲ್ವಾರನಿಂದ ಎಡಕುತ್ತಿಗೆಗೆ ಹೊಡೆದಿದ್ದಾನೆ. ಸದರಿ ಘಟನೆ 10 ನಿಮಿಷಗಳ ಕಾಲ ನಡೆದಿರುತ್ತದೆ. ಒಟ್ಟು 13 ಜನ ಆರೋಪಿತರು ಇದ್ದರು. 3 ಬೈಕಗಳ ಮೇಲೆ 9 ಜನ ಆರೋಪಿತರು ಹಾಗೂ ಕಾರಿನಲ್ಲಿ 5 ಜನ ಆರೋಪಿತರು ಇದ್ದರು. ಸಾಕ್ಷಿ ಪುನಃ ಹೇಳುವುದೇನೆಂದರೆ ಬುಲೆಟ್ ಮೇಲೆ 2 ಜನ, ಶೈನ್ ಹೊಂಡಾ ಬೈಕ್ ಮೇಲೆ 3 ಜನರು, ಸ್ಪೆಂಡರ್ ಬೈಕ್ ಮೇಲೆ 3 ಜನರು ಹಾಗೂ ಕಾರಿನಲ್ಲಿ 5 ಜನರು ಬಂದಿದ್ದರು.

ಹಲ್ಲೆ ಮಾಡುವಾಗ ಅರುಣ, ಕಿರಣ, ರಾಜು, ಶಂಕ್ರೆಪ್ಪ ಹಾಗೂ ಮಲ್ಲಪ್ಪ ಹುದ್ದಾರ 5 ಜನ ಆರೋಪಿತರ ಮೇಲೆ ರಕ್ತದ ಕಲೆಗಳಾಗಿದ್ದವು. ಆರೋಪಿತರು ಎಲ್ಲ ಕುಡುಗೋಲು, ಕೊಡಲಿ ಹಾಗೂ ತಲ್ವಾರಗಳನ್ನು ಕಾರಿನ ಡಿಕ್ಕಿಯಲ್ಲಿಟ್ಟುಕೊಂಡು ಪರಾರಿಯಾದರು. ಕಾರಿನಲ್ಲಿ ಡಿಕ್ಕಿಯಲ್ಲಿ ಆಯುಧಗಳನ್ನು ಇಡುವಾಗಲೂ ಸಹ ಯಾವುದೇ ಸಾರ್ವಜನಿಕರು ಬಂದಿರಲಿಲ್ಲ. ಆರೋಪಿತರು ಜಮಖಂಡಿಯ ದೊಡ್ಡ ಕೆನಾಲ್ ರಸ್ತೆ ಕಡೆಗೆ ಓಡಿ ಹೋದರು.

ಆರೋಪಿತರು ಓಡಿ ಹೋದ 5 ನಿಮಿಷದಲ್ಲಿ ಸುಮಾರು 50 ಜನ ಸಾರ್ವಜನಿಕರು ಸ್ಥಳಕ್ಕೆ ಬಂದರು. ನಾವು ಆರೋಪಿತರು ಓಡಿ ಹೋದ ನಂತರ ಸ್ಥಳಕ್ಕೆ ನನ್ನ ದೊಡ್ಡಪ್ಪ ಹಾಗೂ ಅಜ್ಜನನ್ನು ನೋಡಲು ಹೋದೆವು. ನನ್ನ ತಂದೆ ಯಲ್ಲಪ್ಪ ಬರುವವರೆಗೆ ಸ್ಥಳದಲ್ಲಿದ್ದೆವು. ನನ್ನ ತಂದೆ 4.30-5.00 ಗಂಟೆಗೆ ಸ್ಥಳಕ್ಕೆ ಬಂದರು. ಮಧ್ಯಾಹ್ನ 3.30 ಗಂಟೆಗೆ ವಿಠ್ಠಲ ತಳಗೇರಿ ಹಾಗೂ ಮಲ್ಲಪ್ಪ ತಳಗೇರಿಗೆ ಆರೋಪಿತರು ಒಂದೇ ಸಮಯದಲ್ಲಿ ಹೊಡೆದಿದ್ದಾರೆ. ನನ್ನ ತಂದೆ ಸ್ಥಳಕ್ಕೆ ಬರುವ ಪೂರ್ವದಲ್ಲಿ 15 ಜನ ಮುಧೋಳ ಪೊಲೀಸರು ಬಂದಿದ್ದರು. ಘಟನೆಯಾದ 15 ನಿಮಿಷದಲ್ಲಿ ಪೊಲೀಸರು ಸ್ಥಳಕ್ಕೆ ಬಂದರು. ಪೊಲೀಸರ ಮುಂದೆ ನಾನು ಘಟನೆ ಬಗ್ಗೆ ಹೇಳಿಕೆ ನೀಡಿದ್ದೇನೆ. ಮಿಥುನಕುಮಾರ ಎಂಬ ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಅದೇ ದಿನ ಸ್ಥಳದಲ್ಲಿ ಬರೆದುಕೊಂಡಿದ್ದಾರೆ, ಎಷ್ಟು ಗಂಟೆಗೆ ಎಂದು ನನಗೆ ನೆನಪಿಲ್ಲ.

ದಿನಾಂಕಃ 15-10-2019 ರಂದು 10.00 ಗಂಟೆಗೆ ನಮ್ಮೂರಿನಿಂದ ಮುಧೋಳಕ್ಕೆ ಬಂದು ಸೈಯದಸಾಬ ದರ್ಗಾ ಹತ್ತಿರಕ್ಕೆ ಇರುವ ಕರಾಟೆ ಕ್ಲಾಸಗೆ ಹೋಗಿ ಅಲ್ಲಿ 3.30 ಗಂಟೆವರೆಗೆ ಇದ್ದು ನನ್ನ ಕರಾಟೆ ಕ್ಲಾಸ ಮುಗಿಸಿಕೊಂಡು ಅಲ್ಲಿಂದ 3.45 ಗಂಟೆಗೆ ಮುಧೊಳ ಬಸಸ್ಟ್ಯಾಂಡಗೆ ಬಂದು ಅಲ್ಲಿಂದ ನಮ್ಮೂರ ಮಾರ್ಗವಾಗಿ ಬನಹಟ್ಟಿಗೆ ಹೋಗುವ ಬಸ್ ಹತ್ತಿ ಮುಧೊಳದಿಂದ ನಮ್ಮೂರಿಗೆ 25 ರೂಪಾಯಿ ಕೊಟು ಟಿಕೆಟ್ ತೆಗೆಸಿ ಮುಧೊಳ ಬಿಟ್ಟು 2 ತಾಸಿನ ನಂತರ ನಮ್ಮೂರಿಗೆ ಬಂದು ಇಳಿದೆನು ಎಂದು

ದಿನಾಂಕಃ 30-11-2019 ರಂದು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ. ಸದರಿ ಭಾಗವನ್ನು ನಿಡಿ-5 ಅಂತಾ ಗುರುತಿಸಲಾಯಿತು.

ನನಗೆ ಬಣ್ಣಗಳನ್ನು ಗುರುತಿಸಲು ಬರುತ್ತದೆ. ನನ್ನ ಹೇಳಿಕೆಯಲ್ಲಿ ಕಲ್ಲೊಳ್ಳಿ ರಸ್ತೆಯಿಂದ ಒಂದು ಸಿಲ್ವರ್ ಬಣ್ಣದ ಕಾರು ಬಂತು, ಕಾರಿನಲ್ಲಿ 5 ಜನರು ಇದ್ದರು, ಅರುಣ ಚಾಲಕನಿದ್ದ, ಚಾಲಕನ ಪಕ್ಕದಲ್ಲಿ ಕಿರಣ, ಹಿಂದಿನ ಸೀಟಿನಲ್ಲಿ ಮಲ್ಲಪ್ಪ ಹುದ್ದಾರ, ರಾಜು, ಶಂಕ್ರೆಪ್ಪ ಇದ್ದರು, ಕಾರ ನಂ.ಕೆಎ-25/ಪಿ-7149, ಅರುಣನ ಬಟ್ಟೆ ಬಿಳಿ ಅಂಗಿ ಕರಿ ಪ್ಯಾಂಟ್, ಕಿರಣ ಬಿಳಿ ಅಂಗಡಿ ನೀಲಿ ಜೀನ್ಸ ಪ್ಯಾಂಟ, ಶಂಕ್ರೆಪ್ಪ ಗುಡದಿನ್ನಿ ಹಳದಿ ಮಿಶ್ರಿತ ಚೌಕಡಿ ಫುಲ್ ತೋಳ ಅಂಗಿ, ಬೂದು ಬಣ್ಣದ ಪ್ಯಾಂಟ್ ಹಾಗೂ ಮಲ್ಲಪ್ಪ ಹುದ್ದಾರ ಗುಲಾಬಿ ಅಂಗಿ, ಜೀನ್ಸ ಪ್ಯಾಂಟ್, ರಾಜು ತಿಳಿನೀಲಿ ಬಣ್ಣದ ಅಂಗಿ, ಕಪ್ಪು ಪ್ಯಾಂಟ್ ಹಾಕಿದ್ದ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ, ಏಕೆಂದರೆ ಭಯವಿತ್ತು.

ಆರೋಪಿ-1,14,15 ನಮ್ಮೂರಿನವರು. 3 ಜನರೂ ನಮ್ಮೂರಿನವರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ಇವರೂ 5 ಜನರು ಕಾರ ಡಿಕ್ಕಿ ಓಪನ್ ಮಾಡಿ ತಲ್ವಾರಗಳನ್ನು ತೆಗೆದುಕೊಂಡರು 5 ಜನರ ಕೈಯಲ್ಲಿ ತಲ್ವಾರಗಳಿದ್ದವು, ಕಾರಿನ ಹಿಂದಿನಿಂದ ಕಪ್ಪು ಬಣ್ಣದ ಬುಲೆಟ್ ಬಂತು ಅದರ ಮೇಲೆ ಶಂಕ್ರೆಪ್ಪ ಮತ್ತು ಲಕ್ಷ್ಮಣ ಜಕ್ಕಣ್ಣವರ ಸಿದ್ದು ಈಗ ಪುನಃ ಹೇಳುವುದೇನೆಂದರೆ ಶಂಕ್ರೆಪ್ಪ ಇರಲಿಲ್ಲ, ಇ

ವರು ಬುಲೆಟನಿಂದ ಕೆಳಗೆ ಇಳಿದು ಕಾರ ಡಿಕ್ಕಿಯಿಂದ 2 ಕೊಡಲಿಗಳನ್ನು ತೆಗೆದುಕೊಂಡರು ಎಂದು ಹೇಳಿಲ್ಲ ಎನ್ನುವುದು ನಿಜ, ಏಕೆಂದರೆ ನನಗೆ ಭಯವಿತ್ತು.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ಸ್ಪೆಂಡರ್ ಬೈಕನಲ್ಲಿ ಶ್ರೀಶೈಲ ವಾಲಿಮರದ, ಯಲ್ಲಪ್ಪ ನಾಗರೆಡ್ಡಿ, ಕಾಡಪ್ಪ ಕಂದಗಲ್, ಶ್ರೀಶೈಲ ವಾಲಿಮರದ ಇವರ ಬಟ್ಟೆ ನೆಹರೂ ಅಂಗಡಿ ಬಿಳಿ ಧೊತರ, ಯಲ್ಲಪ್ಪ ನಾಗರೆಡ್ಡಿ ಬಟ್ಟೆ ನೆಹರೂ ಅಂಗಡಿ ಬಿಳಿ ಧೊತರ, ಕಾಡಪ್ಪ ಕಂದಗಲ್ ಪ್ಯಾಂಟ್ ಶರ್ಟು ಹಾಕಿದ್ದರು, ಇವರು ಬೈಕನಿಂದ ಕೆಳಗೆ ಇಳಿದು ಕಾರ ಡಿಕ್ಕಿಯಿಂದ 3 ಕುಡುಗೋಲು ತೆಗೆದುಕೊಂಡರು, ಸ್ಪೆಂಡರ್ ಬೈಕನಲ್ಲಿ ಮುತ್ತಪ್ಪ ಹಾಗೂ ಕಾಡಪ್ಪ ನಾಗರೆಡ್ಡಿ ಇವರಿಬ್ಬರೂ ಪ್ಯಾಂಟ್ ಶರ್ಟು ಹಾಕಿದ್ದರು ಇವರು ಕಾರ ಡಿಕ್ಕಿಯಿಂದ 2 ಕುಡುಗೋಲು ತೆಗೆದುಕೊಂಡರು, ನಮ್ಮ ದೊಡ್ಡಪ್ಪ ವಿಠ್ಠಲ ತಳಗೇರಿ ಇವರು 13 ಜನರನ್ನು ನೋಡಿ ಅಂಜಿ ಬಲಜೇಬಿನಿಂದ ಬಲಗೈಯಿಂದ ಪೋನ್ ಮಾಡಿ ಮಹಾಂತೇಶ ನನ್ನ ಕಡಿಯಾಕತ್ತಾರೋ ನನ್ನ ಕಡಿಯಾಕತ್ತಾರೋ ಎಂದು ಹೇಳಿದ, ಆಗ ರಾಜು ಇವನು ವಿಠ್ಠಲ ತಳಗೇರಿ ಇವರ ಬಲ ಮೊಣಕೈಯನ್ನು ಕಡಿಯುತ್ತಾನೆ, ವಿಠ್ಠಲ ತಳಗೇರಿ ಗಣಿ ಯವರ ತೋಟದಲ್ಲಿ ಓಡಿ ಹೋಗುವಾಗ ಅರುಣ ಇವನು ವಿಠ್ಠಲ ತಳಗೇರಿ ಇವರ ಎಡಗಾಲನ್ನು ಜಗ್ಗಿ ಬಲ ಕುತ್ತಿಗೆ ಭಾಗಕ್ಕೆ ತಲ್ವಾರನಿಂದ ಹೊಡೆದಿದ್ದಾನೆ ಎಂದು ಹೇಳಿಲ್ಲ ಎನ್ನುವುದು ನಿಜ, ಏಕೆಂದರೆ ನನಗೆ ಭಯವಿತ್ತು.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ಕಿರಣ ತಲೆಯಿಂದ ಕುತ್ತಿಗೆವರೆಗೂ ತಲ್ವಾರನಿಂದ ಕಡಿದಿರುತ್ತಾನೆ,

ಮೂಗು, ಕಣ್ಣು, ಬಾಯಿ ಹರಿದಿರುತ್ತದೆ, ಶಂಕ್ರೆಪ್ಪ ಎಡಗೈಯಿಂದ ಹೆಬ್ಬೆರಳನ್ನು ಬಿಟ್ಟು ಉಳಿದ 4 ಬೆರಳುಗಳನ್ನು ಕಟ್ ಮಾಡುತ್ತಾನೆ, ಲಕ್ಷ್ಮಣ ಜಕ್ಕನ್ನವರ ಮಾದಿಗ ಸೂಳೆ ಮಕ್ಕಳು ಇವರನ್ನು ಬಿಡಬೇಡ ನಮ್ಮ ಮೇಲೆ ಕೇಸು ಹಾಕುತ್ತಾರೆ ಮನೆ ಒಡೆದಿರುವುದಕ್ಕೆ ಶ್ರೀಶೈಲ ವಾಲಿಮರದ ಕೋರ್ಟ ಕಾನೂನು ಏನೂ ಮಾಡಂಗಿಲ್ಲ, ಬಿಡಾಕ ಹೋಗಬ್ಯಾಡ್ರಿ ಎಂದು ಕಡಿಯುವರೆಗೆ ಪ್ರೋತ್ಸಾಹ ನೀಡುತ್ತಿದ್ದರು. ಆಗ ನನ್ನ ಅಜ್ಜ ಮಲ್ಲೆಪ್ಪ ತಳಗೇರಿ ಕೈ ಮುಗಿದು ಕಾಲು ಬಿದ್ದು ನನ್ನ ಮಗನನ್ನು ಕಡಿಯಬ್ಯಾಡ್ರಿ ಎಂದರು ಹಾಗೂ ನನ್ನ ಅಜ್ಜ ಕೈಯಿಂದ ಅವರನ್ನು ನೂಕುವಾಗ ಅರುಣ ನಿನ್ನದು ಏನೂ ಇಲ್ಲ ಮುತ್ಯಾ ಹೋಗು ಎಂದಾಗ ರಾಜು ಬಲಗೈಯಿಂದ ಮಲೆಪ್ಪ ತಳಗೇರಿ ಇವರಿಗೆ ಕಲ್ಲು ಎಸೆಯುತ್ತಾನೆ, ಮಲ್ಲಪ್ಪ ಹುದ್ದಾರ ಮಲೆಪ್ಪ ತಳಗೇರಿ ಇವರಿಗೆ ಎಡಕುತ್ತಿಗೆ ಭಾಗಕ್ಕೆ ತಲ್ವಾರನಿಂದ ಕಡಿದನು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ 13 ಜನ ಕಾರು ಗಾಡಿ ಡಿಕ್ಕಿ ಓಪನ್ ಮಾಡಿ ತಲ್ವಾರ ಕೊಡಲಿ ಕುಡುಗೋಲು ಅದರಲ್ಲಿ ಹಾಕಿ ಕಾರನಲ್ಲಿ ಬಂದವರು ಕಾರಿನಲ್ಲಿ ಹತ್ತಿ, ಬೈಕನಲ್ಲಿ ಬಂದವರು ಬೈಕ್‌ನಲ್ಲಿ ಹತ್ತಿ ದೊಡ್ಡ ಕೆನಾಲ್ ರಸ್ತೆಯಲ್ಲಿ ಹೋಗುವಾಗ ವಿಠ್ಠಲ ತಳಗೇರಿ ಇವರ ಶೈನ್ ಹೊಂಡಾ ಬೈಕಗೆ ಹಾಯಿಸಿಕೊಂಡು ಫುಲ್ ಸ್ಪೀಡನಲ್ಲಿ ಹೋದರು, ಕಾರ ಗಾಡಿ ನಂಬರ ಪ್ಲೇಟ್ ಅಲ್ಲಿಯೇ ಬಿದ್ದಿತ್ತು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ಲೋಕಾಪುರ ಹೊಲದ ಪಕ್ಕದಲ್ಲಿ ಪೂಲ್ ಇತ್ತು, ನೀರು ಹೋಗುವ ಪೂಲ್ ಪಕ್ಕದಲ್ಲಿ ನಿಂತು ಎಲ್ಲವನ್ನೂ ನೋಡಿದ್ದೆವು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ಅಲ್ಲಿರುವ ಒಬ್ಬ ಅಂಕಲ್ ಫೋನ್ ತೆಗೆದುಕೊಂಡು ನನ್ನಪ್ಪ ಕಾಡಪ್ಪ ತಳಗೇರಿ ಇವರಿಗೆ ಫೋನ್ ಮಾಡಿ 13 ಜನರ ಹೆಸರು ಹೇಳಿ, ಕಾರಿನಲ್ಲಿ ಬಂದರು, ಬೈಕ ಮೇಲೆ ಬಂದರು ಅವರು ನಮ್ಮೂರಿನವರಾಗಿದ್ದರು ಎಂದು ಹಾಗೂ ಮೇಲಿನ ವಿಷಯವನ್ನು ಎಲ್ಲವನ್ನು ಹೇಳಿ ಫೋನ್ ಇಟ್ಟಿರುತ್ತೇನೆ ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ.

ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಹಾಗೂ ಕಲಂ 164 ಅಡಿ ಹೇಳಿಕೆಯಲ್ಲಿ ನನ್ನ ದೊಡ್ಡಪ್ಪ ಯಲ್ಲಪ್ಪ ತಳಗೇರಿ ಘಟನೆಯಾದ ಸ್ಥಳಕ್ಕೆ ಬಂದರು, ಮೇಲೆ ಹೇಳಿದ 13 ಜನರ ಹೆಸರನ್ನು ಹಾಗೂ ವಿಷಯವನ್ನು ಯಲ್ಲಪ್ಪ ತಳಗೇರಿ ಇವರಿಗೆ ಹೇಳಿದ್ದೇನೆ. ನಾನು ಮತ್ತು ಕಾಂಚನಾ ಓಡಿಕೊಂಡು ಯಲ್ಲಪ್ಪ ರವರ ಮನೆಗೆ ಬಂದೆವು, ಮನೆಯಲ್ಲಿ ಸದಾಶಿವ, ಶಾಂತವ್ವ ಹಾಗೂಉಳಿದ ಕುಟುಂಬ ಜನರು ಇದ್ದರು, ಅವರಿಗೆ ಹೆಸರನ್ನು ಹಾಗೂ ವಿಷಯವನ್ನು ಹೇಳಿದ್ದೇನೆ. ನಂತರ ಅಂಬ್ಯುಲೆನ್ಸ ಬಂದು ಹೆಣವನ್ನು ತೆಗೆದುಕೊಂಡು ಹೋದರು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ.

ದಿನಾಂಕಃ 15-10-2019 ರಂದು ರಂದು ನಾನು ಕರಾಟೆ ಕ್ಲಾಸ ಮುಗಿಸಿಕೊಂಡು ಬರುವಾಗ ಆರೋಪಿತರು ನನ್ನ ದೊಡ್ಡಪ್ಪ ಹಾಗೂ ಅಜ್ಜನಿಗೆ

ಹಲ್ಲೆ ಮಾಡಿ ಕೊಲೆ ಮಾಡಿರುವುದನ್ನು ನಾನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 13 ಜನ ಆರೋಪಿತರು 13 ಆಯುಧಗಳನ್ನು ಹಲ್ಲೆಗೆ ಬಳಸಿದ ನಂತರ ಕಾರ ಡಿಕ್ಕಿಯಲ್ಲಿಟ್ಟರು ಎಂಬ ವಿಷಯವನ್ನು ನನ್ನ ತಂದೆಗೆ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುಮಾ–1 ರಿಂದ 4, 6 ರಿಂದ 13, 18 ರಿಂದ 20, 23 ಇವುಗಳನ್ನು ನೋಡಿ ಗುರುತಿಸಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನೋಡಿದಾಗ 5 ಕುಡುಗೋಲು, 5 ಹತಾರ, 2 ಕೊಡಲಿ ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ಘಟನೆಯನ್ನು ನೋಡಿಲ್ಲ, ನನ್ನ ಅಜ್ಜ ಹಾಗೂ ದೊಡ್ಡಪ್ಪ ಬೈಕ್ ಮೇಲಿಂದ ಬಿದ್ದು ಮೃತರಾಗಿದ್ದರೂ ಸಹಿತ ನನ್ನ ತಂದೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

09-04-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.

ದಿನಾಂಕಃ 09-04-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ನನ್ನ ಅಣ್ಣ ವಿಠ್ಠಲ ಹಾಗೂ ಮಲ್ಲಪ್ಪ ಇವರು ನಮ್ಮ ಹತ್ತಿರ ಹಣ ಪಡೆದಿದ್ದರು, ಹಣ ಮರಳಿ ನೀಡಲು ಬಂದಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿ ಮಲ್ಲಪ್ಪ ಬುಲೆಟ್ ಗಾಡಿ ತೆಗೆದುಕೊಂಡು 2-3 ಸಲ ತಿರುಗಾಡಿದರು, ಈ ಮೊದಲು ಜಗಳ ಆಗಿತ್ತು, ಆಗ ಈ ಜಗಳ ಬಗೆ ಹರಿದಿದೆಯೋ ಇಲ್ಲವೋ ಎಂದು ವಿಠ್ಠಲನಿಗೆ ಕೇಳಿದೆ, ಆಗ ವಿಠ್ಠಲ ನಮ್ಮ ಜಗಳ ಬಗೆ ಹರಿದಿದೆ ಕೋರ್ಟಗೆ ಅಡಾಡ್ಡುವುದು ಇದೆ ಎಂದು ಹೇಳಿದ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ.

ಎಲ್ಲರೂ ಬಂದ ನಂತರ ಹೋಗಿ ನೋಡಲಾಗಿ ರಸ್ತೆಯ ಮೇಲೆ ಕಲ್ಲೋಳಿ ರಸ್ತೆಯಲ್ಲಿ ಮಲ್ಲಪ್ಪನ ಶವ ಬಿದ್ದಿತ್ತು, ವಿಠ್ಠಲನ ಶವ ತೆಗ್ಗಿನಲ್ಲಿ ಬಿದ್ದಿತ್ತು, ವಿಠ್ಠಲನ ಬಲ ತಲೆ, ಕಣ್ಣು ಮೂಗು, ಕೈ ಕುತ್ತಿಗೆ, ಎಲ್ಲ ಅಂಗಾಂಗಳನ್ನು ಚೂರು ಚೂರು ಮಾಡಿದ್ದರು, ಕಿವಿ, ಮೂಗು ಕತ್ತರಿಸಿದ್ದರು. ಕುತ್ತಿಗೆ ಕತ್ತರಿಸಿದ್ದರು ಸ್ವಲ್ಪ ಉಳಿದಿತ್ತು, ಮಲ್ಲಪ್ಪ ಕುತ್ತಿಗೆ ಕತ್ತರಿಸಿದ್ದರು, ರಕ್ತ ಹಳ್ಳ ಹರಿದಂತೆ ಹರಿದಿತ್ತು, ರೇಣುಕಾ ಮತ್ತು ಕಾಂಚನಾ ಪೂಲ್ ಕೆಳಗೆ ಕುಳಿತಿದ್ದರು, ಕೂಗಾಡಿದರೆ ನಮ್ಮನ್ನು ಕಡಿಯುತ್ತಾರೆ ಎಂದು ಅವರು ಬಾಯಿ ಮಾಡಲಿಲ್ಲ, ಒಟ್ಟು 13 ಜನ ಕೊಲೆ ಮಾಡಿದ್ದಾರೆ ಎಂದು ಹೇಳಿದರು, ಅವರ ಹೆಸರು ನೆನಪಿಲ್ಲ, ಸ್ಥಳದಲ್ಲಿ ಮೂರು ಬೈಕ ಇದ್ದವು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ.

ನನ್ನ ತಂದೆ ಮಲೆಪ್ಪ ಮತ್ತು ವಿಠ್ಠಲ ಇವರು ಪ್ಲಾಟ್ ಕ್ರಾಸ ಹತ್ತಿರ ಮೋಟರ್ ಸೈಕಲ್ ಮೇಲಿಂದ ಬಿದ್ದು ಖುಲ್ಲಾ ಆಗಿದ್ದಾರೆ ಎಂದು ಸುದ್ದಿ ಗೊತ್ತಾಯಿತು ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಹೇಳಿ ಬರೆಯಿಸಿಲ್ಲ ಎನ್ನುತ್ತಾರೆ. ಸದರಿ ಭಾಗವನ್ನು ನಿಡಿ–4 ಅಂತಾ ಗುರುತಿಸಲಾಯಿತು.

ನನ್ನ ತಂದೆ ಹಾಗೂ ವಿಠ್ಠಲ ಮೋಟರ್ ಸೈಕಲ್ ಮೇಲೆ ಹೋಗುವಾಗ ಬಿದ್ದು ಗಾಯಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ನಾನು ಹೋಗಿ ನೋಡಿದಾಗ ಅವರಿಗೆ ಗಾಯಗಳಾಗಿದ್ದವು, ಅಂಗಾಂಗಗಳು ಚೂರು ಚೂರಾಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಕ್ತ ಹಳ್ಳ ಹರಿದಂತೆ ಹರಿದಿತ್ತು, ರೇಣುಕಾ ಮತ್ತು ಕಾಂಚನಾ ಪೂಲ್ ಕೆಳಗೆ ಕುಳಿತಿದ್ದರು, ಕೂಗಾಡಿದರೆ ನಮ್ಮನ್ನು ಕಡಿಯುತ್ತಾರೆ ಎಂದು ಅವರು ಬಾಯಿ ಮಾಡಲಿಲ್ಲ, ಒಟ್ಟು 13 ಜನ ಕೊಲೆ ಮಾಡಿದ್ದಾರೆ ಎಂದು ಹೇಳಿದರು, ಅವರ ಹೆಸರು ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುಮಾ–1 ರಿಂದ 3, 6 ಮತ್ತು 17 ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ. ಚಾಸಾ–1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

09-04-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.